ಅ) ಸರ್ಕಾರದ ಅನುದಾನ ಪಡೆಯುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ವೇತನ ತುಂಬಾ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಸರ್ಕಾರವು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗಕ್ಕೆ ಕೊಡುವ ತಿಂಗಳ ವೇತನಕ್ಕೆ ಸಮನಾಗಿ ಮಾಹೆಯಾನ ವೇತನ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಇವುಗಳನ್ನು ಖಾಲಿ ಇರುವ ಸಿಬ್ಬಂದಿಗಳನ್ನು ತಕ್ಷಣ ತುಂಬಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ಸರ್ಕಾರದ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಎಲ್ : 248 : ಎಸ್‌ಬಿಸಿ : 77 ದಿನಾಂಕ: 20.12.1977 ರನ್ವಯ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರಿಗೆ ಕೆಳಗಿನಂತೆ ಗೌರವಧನವನ್ನು ಮಂಜೂರು ಮಾಡಲಾಗುತ್ತಿದೆ.

1) ಮೇಲ್ವಿಚಾರಕರು -ತಿಂಗಳಿಗೆ 125.00 ರಂತೆ 12 ತಿಂಗಳುಗಳು

2) ಅಡಿಗೆಯವರು -ತಿಂಗಳಿಗೆ 100.00 ರಂತೆ 12 ತಿಂಗಳುಗಳು

3) ಅಡಿಗೆ ಸಹಾಯಕರು -ತಿಂಗಳಿಗೆ 75.00 ರಂತೆ 12 ತಿಂಗಳುಗಳು

ಆ) ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಸರ್ಕಾರದಿಂದ ನೇಮಕಗೊಂಡ ನೌಕರರಾಗಿರುವುದಿಲ್ಲ. ಆದ್ದರಿಂದ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿನ ನೌಕರರಿಗೆ ಸರಿಸಮಾನವಾಗಿ ವೇತನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಖಾಲಿ ಹುದ್ದೆಗಳನ್ನು ತುಂಬುವುದು ಆಡಳಿತ ಮಂಡಳಿಯವರಿಗೆ ಸಂಬಂಧಪಟ್ಟಿರುತ್ತದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆ ಅಭಿವೃದ್ಧಿಗೆ ಹಣ ಬಿಡುಗಡೆ

2673 (3430) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ)(ತುರುವೇಕೆರೆ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಕೈಗಾರಿಕೋದ್ಯಮಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ;

ಅ) ಸರ್ಕಾರ ಕಳೆದ ಮೂರು ವರ್ಷದಿಂದ ಕೈಗಾರಿಕಾಭಿವೃದ್ಧಿಗೆ ಎಷ್ಟು ಹಣ ಖರ್ಚು ಮಾಡಿದೆ; ಮತ್ತು ಯಾವ ಉದ್ದೇಶಕ್ಕಾಗಿ ಖರ್ಚು ಮಾಡಿದೆ. ಈ ಸಾಲಿನಲ್ಲಿ, ಯಾವ ಉದ್ದೇಶಕ್ಕೆ ಎಷ್ಟು ಹಣ ಇಡಲು ಸರ್ಕಾರ ಆಲೋಚಿಸಿದೆ; (ಪೂರ್ಣ ವಿವರ ನೀಡುವುದು)

ಇ) ಸಣ್ಣ ಕೈಗಾರಿಕೆಗಳ ಪುನ: ಶ್ಚೇತನದಲ್ಲಿ ತುರುವೇಕೆರೆ ಪಟ್ಟಣ ಸೇರಿದೆಯೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಉದ್ಯಮ ಸ್ಥಾಪಿಸಲು ಕಳೆದ ಮೂರು ವರ್ಷಗಳ ಅವಧಿಯಲ್ಲಿ 113 ಅರ್ಜಿಗಳು ಮತ್ತು ನೋಂದಣಿಯಾಗಿ 210 ಅರ್ಜಿಗಳು ಬಂದಿರುತ್ತದೆ.

ಆ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ತುರುವೇಕೆರೆ ತಾಲ್ಲೂಕಿನಲ್ಲಿ, ಪ್ರಾರಂಭಗೊಂಡು ಹೂಡಿದ ಬಂಡವಾಳಕ್ಕೆ 36 ಘಟಕಗಳಿಗೆ 50.90 ಲಕ್ಷರೂ.ಗಳ ಸಹಾಯಧನವನ್ನು ಮಂಜೂರು ಮಾಡಿದೆ. ಹಾಗೂ ಸರ್ಕಾರಜ ಕೈಗಾರಿಕಾ ನೀತಿಯಂತೆ ಸಹಾಯಧನವನ್ನು ಮಂಜೂರು ಮಾಡಲು ಅವಕಾಶವಿದೆ.

ಇ) ಸಣ್ಣ ಕೈಗಾರಿಕೆಗಳ ಪುನ:ಶ್ಚೇತನದಲ್ಲಿ ತುರುವೇಕೆರೆ ಪಟ್ಟಣವು ಸೇರಿದೆ.

ತುರುವೇಕೆರೆ ನಗರದಲ್ಲಿ ಹುಡ್ಕೋ ನೆರವಿನ ಕಳಪೆ ಕಾಮಗಾರಿ

2674 (ಖಳಖಂ) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ)(ತುರುವೇಕೆರೆ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ನಗರದಲ್ಲಿ ಇತ್ತೀಚೆಗೆ ಹುಡ್ಕೋ ನೆರವಿನಿಂದ ಕಾಮಗಾರಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಕಾಮಗಾರಿಗಳು ಯಾವುವು, ಅವುಗಳು ಎಲ್ಲಿ ನಡೆಯುತ್ತಿವೆ?

ಇ) ಸ್ಥಳೀಯ ಜನರು ಈ ಕಾಮಗಾರಿ ಬಗ್ಗೆ ಅನೇಕ ದೂರು ಸಲ್ಲಿಸಿ ಕಳಪೆ ಕಾಮಗಾರಿ ಎಂದು ಹೇಳಿದರೂ ಸರ್ಕಾರ ಇದುವರೆವಿಗೂ ಯಾವ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು?

4) ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಉತ್ತಮ ಕಾಮಗಾರಿ ಮಾಡಿಸಲು ಸರ್ಕಾರ ಪ್ರಯತ್ನಿಸುವುದೇ;

5) ಕಳಪೆ ಕಾಮಗಾರಿಗೆ ಕಾರಣವಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ?